ರಾಜ್ಯದ ಕರಾವಳಿ ಪ್ರದೇಶದ ಮೂರು ಜಿಲ್ಲೆಯ ಪಟ್ಟಣಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸುವುದು

2694 (3038) ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಕರಾವಳಿ ಪ್ರದೇಶದ ಮೂರು ಜಿಲ್ಲೆಗಳ ವ್ಯಾಪ್ತಿಯ ಎಷ್ಟು; ಪಟ್ಟಣಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ.

ಆ) ಇದಕ್ಕೆ ಯಾವ ಬ್ಯಾಂಕ್‌ನಿಂದ ಎಷ್ಟು ಹಣದ ನೆರವು ಪಡೆಯಲಿದೆ;

ಇ) ಈ ನೆರವಿಗಾಗಿ ಪಡೆಯಲಿರುವ ಹಣಕ್ಕೆ ಬಡ್ಡಿ ಎಷ್ಟು ಮರುಪಾವತಿಗೆ ಕಾಲಮಿತಿ ಹಾಕಲಾಗಿದೆಯೇ;

ಈ) ಈ ಯೋಜನೆಯ ಅನುಷ್ಠಾನದ ವ್ಯಾಪ್ತಿಯಲ್ಲಿ ಬರುವ ಪಟ್ಟಣಗಳಾವುವು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :—

ಅ) -10 ಪಟ್ಟಣಗಳು

ಆ) ಈ ಯೋಜನೆಗೆ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನವರು 175 ಮಿಲಿಯನ್ ಯು.ಎಸ್. ಡಾಲರ್‌ಗಳನ್ನು (ರೂ.780 ಕೋಟಿ, 1998ರ ದರದಂತೆ) ನೆರವನ್ನು ಒದಗಿಸಿರುತ್ತಾರೆ.

ಇ) ಶೇ.13.5

ಮರುಪಾವತಿಯ ಅವಧಿಯು 25 ವರ್ಷಗಳಿಗೆ ವಿಸ್ತರಿಸಲಾಗಿದ್ದು, ಇದರಲ್ಲಿ5 ವರ್ಷಗಳ ಕಾಲ ಮಾರಟೋರಿಯಂ ಅವಧಿಯು ಒಳಗೊಂಡಿರುತ್ತದೆ.

ಈ) ಮಂಗಳೂರು, ಪುತ್ತೂರು, ಉಳ್ಳಾಲ, ಕುಂದಾಪುರ, ಉಡುಪಿ, ಕಾರವಾರ, ಸಿರ್ಸಿ ದಾಂಡೇಲಿ, ಭಟ್ಕಳ್ ಮತ್ತು ಅಂಕೋಲ.

ಮೈಸೂರು ನಗರದಲ್ಲಿ ಎ.ಡಿ.ಬಿ ವತಿಯಿಂದ ರಸ್ತೆ ಕಾಮಗಾರಿಗಳು

2695 (3166) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ನೆರವಿನಿಂದ ಮೈಸೂರು ನಗರದ ಅನೇಕ ರಸ್ತೆಗಳ ಡಾಂಬರೀಕರಣ ಕಾರ್ಯ ಕೈಗೊಳ್ಳಲಾಗುತ್ತಿರುವುದು ನಿಜವೇ; ಹಾಗಿದ್ದಲ್ಲಿ ಯಾವ ಯಾವ ರಸ್ತೆಗಳ ಡಾಂಬರೀಕರಣ ಪೂರ್ಣಗೊಂಡಿದೆ.

ಆ) ಯಾವ ಯಾವ ರಸ್ತೆಗಳ ಡಾಂಬರೀಕರಣ ಕಾರ್ಯ ಪೂರ್ಣಗೊಳ್ಳಬೇಕಾಗಿದೆ;

ಇ) ಇವುಗಳ ಡಾಂಬರೀಕರಣ ಕಾರ್ಯ ಎಂದು ಪೂರ್ಣಗೊಳ್ಳುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) ಹೌದು. ಎ.ಡಿ.ಬಿ. ನೆರವಿನಿಂದ ಎರಡು ಪ್ಯಾಕೇಜ್‌ಗಳಲ್ಲಿ ಕೈಗೊಳ್ಳಲಾಗುತ್ತಿದೆ. ಡಾಂಬರೀಕರಣ ಪೂರ್ಣಗೊಂಡಿರುವ ರಸ್ತೆಗಳ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

ಆ) ಡಾಂಬರೀಕರಣ ಪೂರ್ಣಗೊಳಿಬೇಕಾಗಿರುವ ರಸ್ತೆಗಳ ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ.

ಇ) ಮಧ್ಯಂತರ ವರ್ತುಲ ರಸ್ತೆ 2001ನೇ ಆಗಸ್ಟ್ ತಿಂಗಳ ಕೊನೆಗೆ ಪೂರ್ಣಗೊಳ್ಳುವ ಸಂಭವವಿದೆ. ನಗರ ರಸ್ತೆಗಳು 2001ನೇ ಡಿಸೆಂಬರ್ ಮಾಹೆಯ ಕೊನೆಗೆ ಪೂರ್ಣಗೊಳ್ಳುವ ಸಂಭವವಿದೆ.

ಅನುಬಂಧ-1

ಈ ಕೆಳಕಂಡ ರಸ್ತೆಗಳ ಡಾಂಬರೀಕರಣ ಪೂರ್ಣಗೊಂಡಿದೆ.

ಮಧ್ಯಂತರ ವರ್ತುಲ ರಸ್ತೆ

1. ಕಾಂತರಾಜ್ ಅರಸ್ ರಸ್ತೆ (ಬಳ್ಳಾಲ್ ವೃತ್ತದಿಂದ ಕೆ.ಜಿ. ಕೊಪ್ಪಲ್ ವೃತ್ತದ ವರೆಗೆ)
2. ಕಾಂತರಾಜ್ ಅರಸ್ ರಸ್ತೆ (ಆದಿಚುಂಚನಗಿರಿ ರಸ್ತೆಯಿಂದ ವಿಶ್ವಮಾನವ ಜೋಡಿ ರಸ್ತೆವರೆಗೆ)
3. ವಿಶ್ವಮಾನವ ಜೋಡಿ ರಸ್ತೆ (ಬೋಗಾದಿ ರಸ್ತೆವರೆಗೆ)
4. ವಿಶ್ವವಿದ್ಯಾನಿಲಯ ರಸ್ತೆ (ಹುಣಸೂರು ರಸ್ತೆಯವರೆಗೆ)
5. ದೇವಸ್ಥಾನ ರಸ್ತೆ (ಫ್ರಿನ್ಸಿಸ್ ರಸ್ತೆವರೆಗೆ)
6. ಫ್ರಿನ್ಸಿಸ್ ರಸ್ತೆ (ಆಕಾಶವಾಣಿ ವೃತ್ತದವರೆಗೆ)
7. ಸಯ್ಯಾಜಿರಾವ್ ರಸ್ತೆ (ಹೈವೆ ಸರ್ಕಲ್‌ವರೆಗೆ)
8. ನ್ಯೂ ಬನ್ನಿಮಂಟಪ ರಸ್ತೆ (ಬೆಂಗಳೂರು ಮೈಸೂರು ರಸ್ತೆವರೆಗೆ)
9. ಬೆಂಗಳೂರು ಮೈಸೂರು ರಸ್ತೆ (ಟಿಪ್ಪು ವೃತ್ತದವರೆಗೆ)

10. ಅಬ್ಬಾ ರಸ್ತೆ (ರೂರಲ್ ಎಸ್.ಪಿ. ಆಫೀಸ್‌ವರೆಗೆ)
11. ರೇಸ್ ಕೋರ್ಸ್ ರಸ್ತೆ (ಮೃಗಾಲಯ ವೃತ್ತದವರೆಗೆ)
12. ರೇಸ್ ಕೋರ್ಸ್ ರಸ್ತೆ (ಲಾರಿ ನಿಲ್ದಾಣದವರೆಗೆ)
13. ಸ್ಮಶಾನ ರಸ್ತೆ (ಊಟಿ ರಸ್ತೆವರೆಗೆ)
14. ಜಾನ್ಸಿ ಲಕ್ಷ್ಮಿ ಬಾಯಿ ರಸ್ತೆ (ಸೆಂಟ್ ಮೇರಿಸ್ ವೃತ್ತದವರೆಗೆ)
15. ಜಾನ್ಸಿ ಲಕ್ಷ್ಮಿ ಬಾಯಿ ರಸ್ತೆ (ಚಾಮುಂಡಿಪುರಂ ವೃತ್ತದವರೆಗೆ)
16. ಜಾನ್ಸಿ ಲಕ್ಷ್ಮಿ ಬಾಯಿ ರಸ್ತೆ (ಕಾಂತರಾಜ ಅರಸ್ ರಸ್ತೆವರೆಗೆ)
17. ಕಾಂತರಾಜ ಅರಸ್ ರಸ್ತೆ (ಬಲ್ಲಾಳ್ ವೃತ್ತದವರೆಗೆ)

48 ನಗರ ರಸ್ತೆಗಳು

1 ರಾಜೇಂದ್ರನಗರ ರಸ್ತೆ
2 ಶಿವಾಜಿ ಮುಖ್ಯ ರಸ್ತೆ
3 ಮಿಷನ್ ಆಸ್ಪತ್ರೆ ರಸ್ತೆ
4 ಕಾಳಮ್ಮ ಗುಡಿ ರಸ್ತೆ
5 ನಜರ್ ಬಾದ್ ರಸ್ತೆ
6 ಲೋಕರಂಜನ್ ಮಹಲ್ ರಸ್ತೆ
7 ವಿನಯಮಾರ್ಗ ರಸ್ತೆ
8 ಶಾಲಿವಾಹನ ರಸ್ತೆ
9 ರಮಾವಿಲಾಸ ರಸ್ತೆ
10 ಚಾಮರಾಜ ಜೋಡಿ ರಸ್ತೆ
11 ವಿದ್ಯಾರಣ್ಯಪುರಂ 16ನೇ ಮುಖ್ಯ ರಸ್ತೆ
12 ಜೆ.ಎಲ್.ಬಿ ರಸ್ತೆ
13 ಕಾಮಾಕ್ಷಿ ಆಸ್ಪತ್ರೆ ರಸ್ತೆ
14 ಕಾಂತರಾಜ್ ಅರಸ್ ರಸ್ತೆ
15 ಸರಸ್ವತಿಪುರಂ 5ನೇ ಕ್ರಾಸ್ ರಸ್ತೆ
16 ರಾಜುಕೊಳದ ರಸ್ತೆ (ಸರಸ್ವತಿಪುರಂ)
17 ಧನ್ವಂತ್ರಿ ರಸ್ತೆ

18 ತ್ಯಾಗರಾಜ ರಸ್ತೆ
19 ನಾರಾಯಣ ಶಾಸ್ತ್ರಿ ರಸ್ತೆ
20 ಕುಂಬಾರ ಕೊಪ್ಪಲು ಮುಖ್ಯ ರಸ್ತೆ
21 ಕಾಂಟೂರು ರಸ್ತೆ
22 ಆದಿ ಚುಂಚನಗಿರಿ ರಸ್ತೆ
23 ಇಂಡಸ್ಟ್ರಿಯಲ್ ಸಬರ್ಬ್
24 ವಾಲ್ಮೀಕಿ ರಸ್ತೆ
25 ಆದಿಪಂಪ ರಸ್ತೆ
26 ಡಿ. ಸುಬ್ಬಯ್ಯ ರಸ್ತೆ
27 ಅನಿಕೇತನ ರಸ್ತೆ
28 ಕೆಸರೆಕೊಡು ರಸ್ತೆ
29 ಥಿಯೋಬಾಲ್ಡ್ ರಸ್ತೆ

ಅನುಬಂಧ-2

ಈ ಕೆಳಕಂಡ ರಸ್ತೆಗಳ ಡಾಂಬರೀಕರಣ ಪೂರ್ಣಗೊಳ್ಳಬೇಕಾಗಿದೆ.

<u>ಮಧ್ಯಂತರ ವರ್ತುಲ ರಸ್ತೆ</u>

1 ಕಾಂತರಾಜಅರಸ್ ರಸ್ತೆ (ಆದಿಚುಂಚನಗಿರಿ ರಸ್ತೆ ವೃತ್ತದವರೆಗೆ)
2 ಹುಣಸೂರು ರಸ್ತೆ (ದೇವಸ್ಥಾನ ರಸ್ತೆವರೆಗೆ)
3 ಅಂಡರ್ ಬ್ರಿಡ್ಜ್ ರಸ್ತೆ (ಸಯ್ಯಾಜಿರಾವ್ ರಸ್ತೆವರೆಗೆ)
4 ಬೆಂಗಳೂರು - ಮೈಸೂರು ರಸ್ತೆ (ಟಿಪ್ಪುವೃತ್ತದಿಂದ ಸರ್ಕಾರಿ ಅತಿಥಿ ಗೃಹದವರೆಗೆ)
5 ವಸಂತಮಹಲ್ ರಸ್ತೆ (ನಜರ್‌ಬಾದ್ ವೃತ್ತದವರೆಗೆ)
6 ಹಾರಂಜಿ ಕೆರೆ ದಂಡೆಯ ರಸ್ತೆ (ರೇಸ್‌ಕೋರ್ಸ್ ರಸ್ತೆವರೆಗೆ)

ನಗರ ರಸ್ತೆ

1 ಹಳೆಮ್ಮ ಗುಡಿ ಬೀಡಿ
2 ನಜರ್‌ಬಾದ್ ರಸ್ತೆ
3 ಲೋಕರಂಜನ್ ಮಹಲ್ ರಸ್ತೆ
4 ಜೆ.ಎಲ್.ಬಿ ರಸ್ತೆ

5 ಆದಿಪಂಪ ರಸ್ತೆ
6 ಬನ್ನಿಮಂಟಪ ಇಂಡಸ್ಟ್ರಿಯಲ್ ರಸ್ತೆ
7 ಚಂದ್ರಗುಪ್ತ ರಸ್ತೆ
8 ಹರ್ಷ ರಸ್ತೆ
9 ವಿನೋಬಾ ರಸ್ತೆ
10 ರಾಮಾನುಜ ರಸ್ತೆ
11 ಕಾಳಿದಾಸ ರಸ್ತೆ
12 ಗೊಕುಲಂ ರಸ್ತೆ
13 ಜಾವಾ ಫ್ಯಾಕ್ಟರಿ ರಸ್ತೆ
14 ಮೆಟಗಳ್ಳಿ ಮುಖ್ಯ ರಸ್ತೆ
15 ಬಸವೇಶ್ವರ ರಸ್ತೆ
16 ನಾಡಿ ರಸ್ತೆ
17 ಸೆಂಟ್ ಮೇರಿಸ್ ರಸ್ತೆ
18 ಅಕ್ಬರ್ ರಸ್ತೆ
19 ಕಬೀರ್ ರಸ್ತೆ
20 ಬೆಂಕಿ ನವಾಬ್ ರಸ್ತೆ
21 ಕೆ.ಆರ್. ಆಸ್ಪತ್ರೆ ರಸ್ತೆ
22 ಮಾಸ್ಕ್ ರಸ್ತೆ
23 ಗಾಯಿತ್ರಿಪುರಂ ಮುಖ್ಯ ರಸ್ತೆ
24 ಆನೆ ಸಾರೋಟ್ ರಸ್ತೆ

ಮೈಸೂರು ಮಹಾನಗರಪಾಲಿಕೆ ನಿವೃತ್ತ ನೌಕರರಿಗೆ ಏಳನೇ ವೇತನ ಆಯೋಗದ ಶಿಫಾರಸ್ಸಿನಂತೆ ನಿವೃತ್ತ ವೇತನ ನೀಡುವ ಬಗ್ಗೆ

2696 (3167) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ಮಹಾನಗರಪಾಲಿಕೆ ನಿವೃತ್ತ ನೌಕರರುಗಳಿಗೆ 5ನೇ ವೇತನ ಆಯೋಗದ ಶಿಫಾರಸ್ಸಿನಂತೆ ನಿವೃತ್ತ ವೇತನವನ್ನು ಜಾರಿಗೊಳಿಸಲಾಗಿದೆಯೇ?